ಅ) ಒಟ್ಟು ಖರೀದಿಸಿದ ಬಸ್ಸುಗಳ ಸಂಖ್ಯೆ 1336 ವರ್ಷವಾರು ವಿವರಗಳು:

| | |
|---|---|
| 1999 – 00 | 444 |
| 2000 – 01 | 482 |
| 2001 – 02 | 410 |
| ಒಟ್ಟು | 1336 ಬಸ್‌ಗಳು |

ಇ) ಉತ್ತರ ಕರ್ನಾಟಕದಲ್ಲಿನ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಈ ವ್ಯಾಪ್ತಿಯಲ್ಲಿನ ಒಟ್ಟು 7 ಜಿಲ್ಲೆಗಳ 5217 ಹಳ್ಳಿಗಳ ಪೈಕಿ ರಸ್ತೆ ಸೌಕರ್ಯವಿರುವ ಎಲ್ಲ 5005 ಹಳ್ಳಿಗಳಿಗೆ ಅಗತ್ಯ ಸಾರಿಗೆ ಸೌಲಭ್ಯ ಒದಗಿಸಿದೆ. ಉಳಿದ 212 ಹಳ್ಳಿಗಳಿಗೆ ರಸ್ತೆ ಸೌಲಭ್ಯ ಒದಗಿಸಿದ ಕೂಡಲೇ ಕಲ್ಪಿಸಲಾಗುವುದು.

**ಬೆಂಗಳೂರು ನಗರದಲ್ಲಿ ಪೊಲೀಸ್ ಇಲಾಖೆಗೆ ಸೇರಿದ ಟೈಗರ್ ವಾಹನಗಳು**

1350 (1612) ಶ್ರೀ ಜಗದೀಶ್ ಶೆಟ್ಟರ್, (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪೊಲೀಸ್ ಇಲಾಖೆಗೆ ಸೇರಿದ ಟೈಗರ್ ವಾಹನಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಸರ್ಕಾರಕ್ಕೆ ಸೇರಿದ ವಾಹನಗಳ ಸಂಖ್ಯೆ ಎಷ್ಟು, ಮತ್ತು ಖಾಸಗಿಯವರಿಗೆ ಸೇರಿದ ವಾಹನಗಳ ಸಂಖ್ಯೆ ಎಷ್ಟು?

ಇ) ಈ ಖಾಸಗಿ ಟೈಗರ್ ವಾಹನಗಳಿಗೆ ಒಂದು ದಿನಕ್ಕೆ ಎಷ್ಟು ಬಾಡಿಗೆಯನ್ನು ನೀಡಲಾಗುತ್ತಿದೆ?

ಈ) ಈ ಟೈಗರ್ ವಾಹನಗಳು ಎಳೆದುಕೊಂಡು ಹೋಗುವ ವಾಹನಗಳಿಗೆ ಎಷ್ಟು ದಂಡ ಶುಲ್ಕವನ್ನು ವಿಧಿಸಲಾಗುತ್ತದೆ;

ಉ) ಪ್ರತಿ ಟೈಗರ್ ವಾಹನವು ಪ್ರತಿ ತಿಂಗಳು ಇಂತಿಷ್ಟೆ ವಾಹನಗಳನ್ನು ಒಯ್ದು ಕೇಸುಗಳನ್ನು ದಾಖಲಿಸಿ, ಸರ್ಕಾರದ ವರಮಾನವನ್ನು ಹೆಚ್ಚಿಸಲು ಮೌಖಿಕ ಆದೇಶವನ್ನು ಆಯಾ ಪೊಲೀಸ್ ಠಾಣೆಗೆ ನೀಡಲಾಗಿದೆಯೇ?

ಊ) ಇದರಿಂದ ಈ ಟೈಗರ್ ವಾಹನಗಳು ವಾಹನ ನಿಲ್ದಾಣಗಳಲ್ಲಿ ಸರಿಯಾಗಿ ವಾಹನ ನಿಲುಗಡೆ ಮಾಡಿರುವ ವಾಹನಗಳನ್ನು ಸಹ ಎಳೆದುಕೊಂಡು ಹೋಗಿ ಜನಸಾಮಾನ್ಯರಿಗೆ ಅನಗತ್ಯ ತೊಂದರೆಯನ್ನು ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) 39

ಆ) ಸರ್ಕಾರಕ್ಕೆ ಸೇರಿದ ವಾಹನಗಳು - 07

ಖಾಸಗಿ ಟೈಗರ್ ವಾಹನಗಳು - 32

ಒಟ್ಟು - 39

ಇ) ದಿನವಹಿ ಬಾಡಿಗೆ ನೀಡುವ ವ್ಯವಸ್ಥೆ ಇರುವುದಿಲ್ಲ. ಪ್ರತಿ ಮಾಹೆ ವಾಹನಗಳ ಸಂಖ್ಯೆಗನುಗುಣವಾಗಿ ಹಣವನ್ನು ನೀಡಲಾಗುವುದು.

ಈ) ಅ) ದ್ವಿಚಕ್ರ ವಾಹನಗಳಿಗೆ - ರೂ. 100 - 00

ಅ) ನಾಲ್ಕು ಚಕ್ರ ವಾಹನಗಳಿಗೆ - ರೂ.150.00

ಇ) ಭಾರಿ ವಾಹನಗಳಿಗೆ - ರೂ.250.00

ನಿಲ್ದಾಣವಲ್ಲದ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿದಲ್ಲಿ ವಿಧಿಸುವ ದಂಡದ ವಿವರ ಈ ಕೆಳಕಂಡಂತೆ ಇದೆ.

ಅ) ದ್ವಿಚಕ್ರ ವಾಹನಗಳಿಗೆ - ರೂ. 100.00

ಆ) ನಾಲ್ಕು ಚಕ್ರವಾಹನಗಳಿಗೆ - ರೂ. 100.00

ಇ) ಭಾರಿ ವಾಹನಗಳಿಗೆ - ರೂ. 100.00

ಉ) ಈ ಬಗ್ಗೆ ಯಾವುದೇ ಆದೇಶ ನೀಡಿರುವುದಿಲ್ಲ.

ಊ) ಇಲ್ಲ.

**ಕರ್ನಾಟಕ ಅಗ್ನಿಶಾಮಕ ಸೇವಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ**

1352 (1615) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಅಗ್ನಿಶಾಮಕ ಠಾಣೆಗಳು ಇವೆ? (ಜಿಲ್ಲಾವಾರು ವಿವರ ನೀಡುವುದು)

ಆ) ಇಲಾಖೆಯಲ್ಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು:ಹುದ್ದೆವಾರು ವಿವರ ನೀಡುವುದು) :

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಈ) ಅಪಾಯಕಾರಿ ಸನ್ನಿವೇಶಗಳಲ್ಲಿ ಕಾರ್ಯ ನಿರ್ವಹಿಸುವ ಅಗ್ನಿಶಾಮಕ ಸಿಬ್ಬಂದಿಗೆ ಸರ್ಕಾರ ನೀಡುತ್ತಿರುವ ವಿಶೇಷ ಸವಲತ್ತುಗಳು ಯಾವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 106 ಅಗ್ನಿಶಾಮಕ ಠಾಣೆಗಳು ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲೆ ಹಾಗೂ ಠಾಣಾವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಆ) ಅಗ್ನಿಶಾಮಕ ಸೇವಾ ಇಲಾಖೆಯಲ್ಲಿ ಒಟ್ಟು 2232 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು ಠಾಣಾವಾರು ಹುದ್ದೆವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಇ) ಇಲಾಖೆಯಲ್ಲಿ ಒಟ್ಟು 2293 ಖಾಲಿ ಹುದ್ದೆಗಳು ಇರುತ್ತವೆ. ಈ ಹುದ್ದೆಗಳ ಪೈಕಿ ನೇರ ನೇಮಕಾತಿಯಿಂದ ತುಂಬ ಬೇಕಾಗಿರುವ 554 ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಅಪಾಯಕಾರಿ ಸನ್ನಿವೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಸಿಬ್ಬಂದಿಗಳು ಗಾಯಗೊಂಡಲ್ಲಿ ಗಾಯದ ಪ್ರಮಾಣದನ್ವಯ ಅನುಗ್ರಹ ಪೂರ್ವಕ ಪೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 18 ಎಸ್‌ಎಫ್‌ಬಿ 85, ದಿನಾಂಕ: 17.11.1988ರಲ್ಲಿ ಮಂಜೂರಾತಿ ನೀಡಿರುವಂತೆ ಪಾವತಿಸಲಾಗುತ್ತಿದೆ. (ಪ್ರತಿ ಲಗತ್ತಿಸಿದೆ)

ಇದಲ್ಲದೆ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 200 ಎಸ್‌ಎಫ್‌ಬಿ 90, ದಿನಾಂಕ 30.11.1991 ರಲ್ಲಿ ಮಂಜೂರಾತಿ ನೀಡಿರುವಂತೆ ಕರ್ತವ್ಯದಲ್ಲಿ ಗಾಯಗೊಂಡರೆ ಅಥವಾ ಮರಣ ಹೊಂದಿದರೆ ಈ ಕೆಳಕಾಣಿಸಿರುವ ಸೌಲಭ್ಯಗಳನ್ನು ವಿಮಾ ಸಂಸ್ಥೆಯಿಂದ ನೀಡಲಾಗುತ್ತಿದೆ.